**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ** 1040/2021 **CW**-9 **PW**-8

**ಸಾಕ್ಷಿಯನ್ನು ದಿಃ 11.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ವಿನೋದ್ ರಾಜ್ |
| ತಂದೆಯ ಹೆಸರುಃ | ಲೇಟ್ ಪುಟ್ಟನಂಜಯ್ಯ |
| ವಯಸ್ಸುಃ | 40 ವರ್ಷ |
| ವೃತ್ತಿಃ | ಪಿ ಐ, ಡಿ ಐ ಜಿ. ಪಿ ಕ್ರೈಂ ಕೇಂದ್ರ ವಲಯ |
| ವಾಸ ಸ್ಥಳಃ | ಬೆಂಗಳೂರು |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ 30.08.2020 ರಿಂದ 03.06.2021 ರವರೆಗೆ ನಾನು ಚನ್ನರಾಯಪಟ್ಟಣ ನಗರ ಠಾಣೆಯುಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 25.03.2021 ರಂದು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-8 ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ.

ಅದೇ ದಿನ ಮದ್ಯಾಹ್ನ 2.00 ರಿಂದ 3.00 ರ ಸಮಯದಲ್ಲಿ ಚಾಸಾ-2 ರವರು ಸ್ಥಳವನ್ನು ತೋರಿಸಿದ್ದು ಚಾಸಾ-5 ಮತ್ತು ಚಾಸಾ-6 ರವ ರಸಮಕ್ಷಮ ಸ್ಥಳ ಮಹಜರ್ ಕ್ರಮ ಜರುಗಿಸಿ ಮು ಮಾ-1 ನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ.

ಸಾಕ್ಷಿ ಸ್ಥಳ ಮತ್ತು ಅಮಾನತ್ತು ಮಹಜರ್ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು.

ಅದೇ ದಿನ ಅಮಾನತ್ತುಪಡಿಸಿಕೊಂಡ ಮು ಮಾ-1 ನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 58/2021 ರಲ್ಲಿ ನಮೂದಿಸಿರುತ್ತೇನೆ. ಸಾಕ್ಷಿ ಮು ಮಾ-1 ನ್ನು ನೋಡಿ ಗುರುತಿಸಿರುತ್ತಾರೆ.

ಅದೇ ದಿನ ಚಾಸಾ-2 ಮತ್ತು ಚಾಸಾ-3 ರವ ರಹೇಳಿಕೆಯನುನ ಪಡೆದಿರುತ್ತೇನೆ.

ದಿಃ 28.03.2021 ರಂದು ಚಾಸಾ-4 ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 09.04.2021 ರಂದು ಆರೋಪಿತರು ನ್ಯಾಯಾಲಯದ ಜಾಮೀನು ಆದೇಶವನ್ನು ಹಾಜರುಪಡಿಸಿದ್ದು, ಸದರಿಯವರನ್ನು ವಿಚಾರಣೆ ಮಾಡಿ ಸ್ವ-ಇಚ್ಛಾ ಹೇಳಿಕೆ ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ.

ಅದೇ ದಿನ ಚಾಸಾ-1 ರವರ ಮರು ಹೇಳಿಕೆ ಪಡೆದಿರುತ್ತೇನೆ.

ದಿಃ 23.04.2021 ರಂದು ಚಾಸಾ-7 ರವರಿಂದ ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ.

ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿ ಮಹಜರ್ ಸಮಯದಲ್ಲಿ ತೆಗೆಯಲಾಗದ 2 ಫೋಟೋಗಳನ್ನು ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಚಾಸಾ-3 ಮತ್ತು ಚಾಸಾ-4 ರವರು ನಿಪಿ-4 ಮತ್ತು ನಿಪಿ-2 ರಂತೆ ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ.

ಸಾಕ್ಷಿ ನ್ಯಾಯಾಲಯದಲ್ಲಿರುವ 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

(2ನೇ ಆರೋಪಿ ಗೈರು ಹಾಜರಿದ್ದು 2ನೇ ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ).

ದಿಃ 23.04.2021 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಯ ವಿರುದ್ಧ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಎನ್ ಎಸ್ ರವರಿಂದ ಃ**

ಸ್ಥಳವನ್ನು ಚಾಸಾ-2 ರವರು ತೋರಿಸಿರುತ್ತಾರೆ. ಸದರಿ ಚೆಕ್ಕುಬಂದಿಯನ್ನು ಅಕ್ಕಪಕ್ಕದವರು ಹೇಳಿರುತ್ತಾರೆ. ಘಟನೆ ನಡೆದ ಸ್ಥಳ ಸಾರ್ವಜನಿಕ ರಸ್ತೆಯಾಗಿರುತ್ತದೆ. ಸದರಿ ರಸ್ತೆ

ಆರೋಪಿ ಮತ್ತು ಪಿರ್ಯಾದಿ ರವರ ಮನೆಯ ಮುಂದೆಯ ಸಾರ್ವಜನಿಕ ರಸ್ತೆ ಅಲ್ಲ. ನಾನು ಸ್ಥಳಕ್ಕೆ  ಹೋಗಿಲ್ಲ ಮತ್ತು ಸ್ಥಳ ಮಹಜರ್ ನ್ನು ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಮು ಮಾ–1 ನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಪೋಲೀಸ್ ಠಾಣೆಯಲ್ಲಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಸಿ ಕೆ ಗೋಪಾಲಕೃಷ್ಣ ಸದರಿಯವರು ಆ ಸಮಯದಲ್ಲಿ ಕೌನ್ಸಿಲರ್ ಆಗಿದ್ದರು. ಸದರಿಯವರು ಚಾಸಾ–1 ರವರ ತಮ್ಮ ಎಂದರೆ ಇರಬಹುದು. ಆರೋಪಿತರು ಮತ್ತು ಚಾಸಾ–1 ರವರ ಕುಟುಂಬದಲ್ಲಿ ರಾಜಕೀಯ ವೈಶಮ್ಯ ಇತ್ತು ಎಂದರೆ ಗೊತ್ತಿಲ್ಲ. ಸಾಕ್ಷಿದಾರರ ಹೇಳಿಕೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಯಾವುದೇ ಸ್ವ–ಇಚ್ಛಾ ಹೇಳಿಕೆಯನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1 ರವರ ಮರು ಹೇಳಿಕೆ ಪಡೆದ ನಂತರ ತನಿಖೆಯನ್ನು ಕೈಗೊಂಡಿದ್ದೇನೆ. ನಿಪಿ–7 ರ ಪೋಟೋದಲ್ಲಿ ಸಮಯ ನಮೂದು ಇಲ್ಲ ಎಂದರೆ ಸರಿ. ಮಹಜರ್ ನಲ್ಲಿ ಪೋಟೋ ತೆಗೆದವರ ವಿವರಣೆ ನಮೂದು ಇಲ್ಲ ಎಂದರೆ ಸರಿ. ಈ ಪ್ರಕರಣಕ್ಕಾಗಿ ನಿಪಿ–7 ರ ಪೋಟೋವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತನಿಖೆಯಲ್ಲಿ ಆರೋಪಿತರಿಂದ ಯಾವುದೇ ಆರೋಪ ಕಂಡುಬರದಿದ್ದರೂ ಸುಳ್ಳು ತನಿಖೆ ಮಾಡಿ, ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ  ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**